ತಪ್ಪಿದರೆ ಮೇಲ್ಕಂಡ ಕಲಂನಲ್ಲಿ ನಮೂದಾದ 500 ರೂಪಾಯಿಗಳು ಡಿಪಾಜಿಟ್ ಸರ್ಕಾರಕ್ಕೆ ದಂಡವಾಗಿ ಜೇರಿಸಿಕೊಳ್ಳಲ್ಪಟ್ಟು ಹೊಸ ಸ್ತು ಖಾಯಿಷ್ ಮಾಡಲ್ಪಡುವವು. ಮಂಜೂರ್ಮಾಡಲ್ಪಡದ ದರಖಾಸ್ತುದಾರರ ಡಿಪಾಜಿಟ್ ಮೊಬಲಗು ಕೂಡ್ಲೆ ವಾಪಸ್ ಮಾಡಲ್ಪಡುವದು.

4. ದರಖಾಸ್ತಿನಲ್ಲಿ ಕೆಲಸದ ಪ್ರತಿ ಬಾಬಿಗೂ ಖಾಯಿಷ್ ಮಾಡಿದ ದರ, ಪೂರಾ ಕೆಲಸವು ಪೂರೈಸುವ ಕಾಲ, ಯಾವ ತಪ್ಪಾಗಲಿ ಬಾದರೆ ಆ ಬಗ್ಗೆ ದಂಡ ಇಂತಾದ್ದನ್ನು ನಮೂದಿಸತಕ್ಕದ್ದು.

5. ದರಖಾಸ್ತು ಬಂದು ಮಾಡಲ್ಪಟ್ಟು "ಶಿಕಾರಿಪುರದಲ್ಲಿ ಹೊಸತಾಲ್ಲೂಕು ಕಚ್ಚೇರಿಯನ್ನು ಕಟ್ಟುವ ಬಗ್ಗೆ ದರಖಾಸ್ತು" ಯೆಂದು ವಿಲಾಸ ಖರಯಲ್ಪಟ್ಟು, ಶಿವಮೊಗ್ಗಾ ಡಿವೀರ್ಜ ಎಗ್ಜಿಕ್ಯೂಟಿವ್ ಇಂಜನಿಯರಿಗೆ ಕಳುಹಿಸಲ್ಪಡತಕ್ಕದ್ದು.

ಸ್ರ್ 1884ನೇ ಜುಲೈ 15ನೇ ಮಟ್ಟಿಗೆ ತರುವಾಯ ಯಾವ ದರಖಾಸ್ತೂ ತೆಗದುಕೊಳ್ಳಲ್ಪಡಲಾರದು.

6. ಇನ್ನೂ ಹೆಚ್ಚಿಗೇ ಸಂಗತಿಯೂ, ಸಬ್ ಹೆಡ್‌ಗಳ ಷೆಡ್ಯೂಲ್ ಪಟ್ಟಿಯೂ, ಇದರಡಿ ರುಜು ಮಾಡಿರುವವರಿಗೆ ದರಖಾಸ್ತು ಮಾಡಿ ಪಡಕೊಳ್ಳಬಹುದು.

7. ಇದರಡಿ ರುಜು ಮಾಡಿರುವವರು ಕಮ್ಮಿ ದರಖಾಸ್ತನ್ನಾಗಲಿ ಯಾವ ದರಖಾಸ್ತನ್ನಾಗಲಿ ಹಾಗೆ ಮಾಡಲಿಕ್ಕೆ ಯಾವ ಸಬಬನ್ನೂ ನಮೂದಿಸದೆ ಮಂಜೂರ್ಮಾಡತಕ್ಕ ಅಧಿಕಾರವನ್ನು ತಮ್ಮಲ್ಲಿಯೇ ಉಳಿಸಿಕೊಂಡಿರುತ್ತಾರೆ.

ಡಿ. ರಂಗರಾವ್,
ಫಾರ್ ಎಗ್ಜಿಕ್ಯೂಟಿವ್ ಇಂಜನಿಯರ್.

ಶಿವಮೊಗ್ಗಾ ಸಬ್ ಡಿವೀರ್ಜ ಮುನಸಿಫ್ ಮಾಜಿಸ್ಟ್ರೇಟ್ ಕೋರ್ಟಿನಿಂದ.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ, ಈ ಕೋರ್ಟ್ 1883ನೇ ಇಸವಿ ಅರಜನಲ್ ಕೇಸ್ ನಂಬರ್ 70ನೇ ಮೊಕದ್ದಮಾದಲ್ಲಿ ಹಾಜರಾದ, ಪೊಲೀಸಿನವರು ಗುಮಾನೀಮೇಲೆ ಹಿಡಿದು ಹಾಜರ್ ಪಡಿಸಿದ 4735ನೇ ನಂಬರ್ ಸ್ರ್ 1878ನೇ ಇಸವಿ ಬಂಬಾಯಿ ನೋಟ್ 10 ರೂಪಾಯಿನ ಬಾಬತು ಎಜಭಾಗದ ಅರ್ಧ ತುಂಡಿ ಬೇದಾವೆ ಸೊತ್ತಾಗಿ ಸೇರಿಸಿಕೊಂಡಿದೆ, ಯಿದಕ್ಕೆ ಯಾರಾದರು ವಾರಸ್‌ದಾರ್ರು ಯಿದ್ದರೆ ಈ ತಾರೀಖು ಲಾಗಾಯತು 6 ತಿಂಗಳ ವಳಗಾಗಿ ಕೋರ್ಟು ರೂಬರೂ ಹಾಜರಾಗಿ ಬಾಧ್ಯತೆ ವ್ಯವಹರಿಸಿಕೊಳ್ಳಬೇಕು. ಆ ವೇರೆ ಯಾರೂ ಬಾರದಿದ್ದರೆ ವಾಯಿದಾನಂತರ ಸರಕಾರಕ್ಕೆ ಜೇರಿಸಿಕೊಳ್ಳಲಾಧೀತು.

ತಾರೀಖು 7ನೇ ಮಾಹೆ ಜೂ 1884ನೇ ಇಸವಿ.

ವಿ. ಡಿ. ಪೊನ್ನರಂಗಂ ಮೊದಲಿಯಾರ್,
ಸಕೆಂಡ್ ಕ್ಲಾಸ್ ಮಾಜಿಸ್ಟ್ರೇಟ್.

ಸ್ರ್ 1884ನೇ ಇಸವಿ ಏಪ್ರಲ್ ತಿಂಗಳ ಕಾಲಸ್ಥಿತೀ ರಿಪ್ರೋರ್ಟು.

ಮೈಸೂರು ಡಿಸ್ಟ್ರಿಕ್ಟು.

ಮಳೆ—ಡಿಸ್ಟ್ರಿಕ್ಟ್‌ನಮುಳೆ ಸಾಧಾರಣವಾಗಿ ಮಳೆ ಬಿದ್ದಿರುತ್ತೆ; ರಿಜಿಸ್ಟ್ರಾದ ಸರಾಸರಿ ಪರಿಮಾಣವು 1 ಅಂಗುಲ 11¼ ಸೆಂಟ್ಸ್.

ಬೆಳೆಗಳು.—ಬೆಳೆಯಲ್ಲಿರುವ ಫಸಲ್‌ಗಳು ಚನ್ನಾಗಿವೆ: ಈ ತಿಂಗಳೊಳಗೆ ಕಾರ್ ರಾಗಿ, ಜೋಳ, ನೆಲ್ಲು, ಹೆಸರು, ಉದ್ದು ಮತ್ತು ಯೆಳ್ಳು ಬಿತ್ತಲ್ಪಟ್ಟವು, ಗನ್ನ ಕಟಾವಾಯಿತು.

ಕಾಲ್ನಡೆ—ಡಿಸ್ಟ್ರಿಕ್ಟಿನಲ್ಲಿ ಗೋಮಾರೀ ರೋಗವು ಇಲ್ಲ. ಆದರೆ ಇತರ ಕಾರಣಗಳಿಂದ 1,428 ಕಾಲ್ನಡೆಗಳು ಹೋಗಿರುತ್ತವೆ.

ದಾರಣೆಗಳು.—ಅವಲ್ ತರಹೆ ಅಕ್ಕಿ ರೂಪಾಯಿ ಬಂದಕ್ಕೆ 12 ಶೇರು; ದುಯ್ಯೋಂ ತರಹೆ 13 ಶೇರು; ರಾಗಿ 30 ಶೇರು; ಮತ್ತು ಹುರಳಿ 25 ಶೇರು; ಜಿನಸಿಗಳ ದಾರಣೆಗಳುಈ ಪ್ರಕಾರ ಇದ್ದವು.

ಎಸ್. ಚೆಲುವಯ್ಯಂಗಾರ್,
ಫಾರ್ ಡೆಪ್ಯೂಟಿ ಕಮ್ಮಿಷನರ್.